ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.   3398/2022

ಸಿ.ಡಬ್ಲ್ಯೂ -04
ಪಿ.ಡಬ್ಲ್ಯೂ-04

ಸಾಕ್ಷಿದಾರನ ಹೆಸರು  :- ಹನುಮಂತರಾಯಪ್ಪ
ತಂದೆಯ   ಹೆಸರು  :-  ಹನುಮಂತಯ್ಯ
ವಯಸ್ಸು  :- 50 ವರ್ಷ
ಉದ್ಯೋಗ  :- ಕೂಲಿ
ವಾಸ  :- ಎ.ಕೆ. ದೊಡ್ಡಿ

**ಸಾಕ್ಷಿಗೆ ದಿಃ 29.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿತರು ನನಗೆ ಗೊತ್ತು. ಚಾಸಾ 1 ನನಗೆ ಗೊತ್ತು. ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇಲ್ಲ. ನಾನು ಪೊಲಿಸರು ಮುಂದೆ ನಾನು ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ದಿಃ 02.08.2021 ರಂದು  ಸಂಜೆ 5 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ 3 ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ  ಆರೋಪಿ 1 ಅವರ ಹಸು ಚಾಸಾ 1 ಅವರ ಜಮೀನಿನಲ್ಲಿ ಬೆಳೆದಿದ್ದ ಸೀಮೆ ಹುಲ್ಲನ್ನು ಮೇಯ್ದ ವಿಚಾರಕ್ಕೆ ಚಾಸಾ 1 ಅವರು ಆರೋಪಿತರನ್ನು ಏಕೆ ನಮ್ಮ ಹೋಲಕ್ಕೆ ಹಸುವನ್ನು ಬಿಟ್ಟು ಮೇಯಿಸಿದ್ದಿರಾ ಎಂದು ಕೇಳಿದಕ್ಕೆ ಆರೋಪಿತರು ಚಾಸಾ 1 ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಆರೋಪಿ 1 ಕೂಡಲಿನಿಂದ ಚಾಸಾ 1 ಅವರ ಹಣೆಯ ಭಾಗಕ್ಕೆ ಹೊಡೆದು ರಕ್ತ ಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 2 ಮತ್ತು 3 ಚಾಸಾ 1 ಅವರನ್ನು ಕೆಳಗೆ ಕೆಡವಿ ಕೈಗಳಿಂದ ಹೊಡೆದು ನೊವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮತ್ತು ಚಾಸಾ 3 ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ಅವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಿಃ 10.09.2021 ರಂದು ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ್ಠ . ಸದರಿ ಹೇಳಿಕೆಯನ್ನು ನಿ.ಪಿ 4 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರು ಸಹ ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.